ಗೇಣಿ ರೈತರನ್ನು ಗುರ್ತಿಸಿರುವುದಿಲ್ಲ. ಹಾಗೆಯೇ ಪರಿಹಾರದ ಕಂತು ಕಟ್ಟುವವರಿಗೂ ಅವರು ಕಟ್ಟಲೇ ಬೇಕೆಂದು ತಿಳುವಳಿಕೆ ಕೊಟ್ಟಿರುವುದಿಲ್ಲ. ಪರಿಸ್ಥಿತಿ ಹೀಗಿದ್ದು ಯಾರೂ ಪರಿಹಾರದ ಕಂತುಗಳನ್ನು ಕಟ್ಟುತ್ತಿಲ್ಲ. ಈ ಮಧ್ಯೆ ಈಗಾಗಲೇ ಬಹಳ ಜನ ಸಣ್ಣ ಗೇಣೀ ರೈತರಿಗೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಕೊಡಿಸಿ ಈಗ ಅದು ಬಾಕಿಯಾಗಿದೆ, ಇದೆಲ್ಲ. ನಡೆದದ್ದು ಸರ್ಕಾರದ ಆದೇಶದಂತೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನವರು ತಮಗೆ ಯಾವುದೇ ಸರ್ಕಾರದ ಆದೇಶವಿಲ್ಲವೆಂದು ತಿಳಿಸುತ್ತಾ ಸದರೀ ಸಣ್ಣ ಗೇಣಿ ರೈತರಿಗೆ ನೋಟೀಸು ಕೊಟ್ಟಿದ್ದು, ಈಗಾಗಲೇ ಜಪ್ತಿಗೂ ಮತ್ತು ಹರಾಜಿಗೂ ನೋಟೀಸುಗಳು ಬಂದು ರೈತರು ಕಂಗಾಲಾಗಿದ್ದಾರೆ, ಅವರು ನಿಜವಾಗಿಯೂ ಹಣ ಕಟ್ಟ ಬೇಕಾಗಿಲ್ಲ. ನಾನೇ ಸ್ವತಃ ಪರೀಕ್ಷಿಸಿದ್ದೇನೆ. ಸರ್ಕಾರದವರು ಈ ವಿಷಯದಲ್ಲಿ ಎಲ್ಲ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಕೂಡಲೇ ತಿಳುವಳಿಕೆ ಕೊಟ್ಟು ಅವರ ಜಮಾನು ಹರಾಜಾಗುವುದನ್ನು ನಿಲ್ಲಿಸಿಕೊಡಬೇಕಾಗಿ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ೧೦ ಎಕರೆ ಒಳಗೆ ಯಾರು ಪ್ರೀಮಿಯಮ್ ಕಟ್ಟಬೇಕಾಗಿತ್ತೋ, ಅದನ್ನು ವಜಾ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ ಅಂದರೆ ಯಾರು ಸರ್ಕಾರದಲ್ಲಿ ಬಾಕಿ ಉಳಿಸಿಕೊಂಡಿದ್ದರೋ ಅದನ್ನು ವಜಾ ಮಾಡಿದ್ದಾರೆ ಆದರೆ ಯಾರು ಸಾಲ ಸೋಲ ಮಾಡಿ ಹಣ ತೀರಿಸಿದ್ದಾರೆ ಅಂಥಾದ್ದನ್ನು ವಜಾ ಮಾಡುತ್ತೇವೆಂದು ಹೇಳಿಲ್ಲ. ಈ ಬಗ್ಗೆ ಈ ಸದನದಲ್ಲಿ ೨-೩ ಸಾರಿ ಕ್ಲಾರಿಫೈ ಮಾಡಿದ್ದೇನೆ. ಸಂಬಂಧಪಟ್ಟ ಕಂದಾಯ ಮಂತ್ರಿಗಳು ಕ್ಲಾರಿಫೈ ಮಾಡಿದ್ದಾರೆ. ಈಗ ಸ್ಥಿತಿ ಏನಾಗಿದೆ ಎಂದರೆ ಈ ಭೂ ಅಭಿವೃದ್ಧಿ ಬ್ಯಾಂಕ್‌ಗೆ ೫-೬ ವರ್ಷದಿಂದ ರೈತರು ಸುಮಾರು ೧೧ ಕೋಟಿ ರೂಪಾಯಿಯಷ್ಟು ಹಣವನ್ನು ಸಾಲ ಮಾಡಿ ತುಂಬಿದ್ದಾರೆ ಅದನ್ನು ಬಿಡಿ ಎಂದರೆ ಬಹಳ ಕಷ್ಟವಾಗುತ್ತದೆ, ಈಗ ಇದನ್ನೇ ತಡೆದುಕೊಳ್ಳುವುದು ಕಷ್ಟವಾಗಿದೆ. ಈಗ ಇನ್ನೂ ಔಟಲೇ ೭ ಕೋಟಿ ರೂಪಾಯಿ ಬರಬೇಕಾಗಿದೆ. ಆ ಬಗ್ಗೆ ವಸೂಲ್ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದನ್ನೂ ವಸೂಲ್ಮಾಡಬೇಡಿ ಎಂದರೆ ಯಾವ ಅಭಿವೃದ್ಧಿ ಬ್ಯಾಂಕ್ ಕೂಡ ಕೆಲಸ ಮಾಡುವುದಕ್ಕಾಗುವುದಿಲ್ಲ. ಜೊತೆಗೆ ಇನ್ನೇನಾಗಿದೆ ಎಂದರೆ ನಬಾರ್ಡ್‌ನವರಿಗೂ, ಪಲ್ರ್ಡ ಬ್ಯಾಂಕ್‌ನವರಿಗೂ ಇದರ ಬಗ್ಗೆ ಒಂದು ಒಪ್ಪಂದವಾಗಿದೆ. ಆದುದರಿಂದ ಈಗ ಬಾಕಿ ಇರುವ ದುಡ್ಡನ್ನು ವಸೂಲ್ಮಾಡಬೇಕಾಗಿದೆ. ಹಾಗೆ ವಸೂಲ್ಮಾಡದೇಹೋದರೆ ಮುಂದೆ ಹಾಗೆ ಅವರಿಂದ ಯಾವ ವಿಧನಾದ ಸಹಾಯವೂ ಸಿಕ್ಕುವುದಿಲ್ಲ ಮುಂದೆ ನಾವೇನಾದರೂ ಒಂದು ಮೈನರ್ ಇರಿಗೇಷನ್ ಕೆಲಸ ಮಾಡುವುದಕ್ಕಾಗಲೀ ಅಥವಾ ಇನ್ನು ಇತರೇ ಕೆಲಸಕಾರ್ಯಗಳನ್ನು ಮಾಡುವುದಕ್ಕಾಗಲಿ ಹಣ ಬೇಕಾದರೆ ಅವರಿಗೆ ಹಣ ಸಿಕ್ಕುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರುಗಳು ಈ ವಸೂಲಿ ಕ್ರಮಕ್ಕೆ ದಯವಿಟ್ಟು ಸಹಕರಿಸಬೇಕು ಎಂದು ಹೇಳುತ್ತೇನೆ. ಜೊತೆಗೆ ಈಗ ಯಾರೂ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ಪಡೆದುಕೊಂಡು ಆ ಹಣವನ್ನು ತೀರಿಸಿದ್ದಾರೆ, ಅದನ್ನು ವಜಾ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಮತ್ತೊಮ್ಮೆ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

14 ಪುತ್ತೂರಿನ ಸರ್ಕಾರಿ ಪದವಿಪೂರ್ವ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸುವುದು

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದ ಪುತ್ತೂರು ಕಂದಾಯ ಉಪ ವಿಭಾಗದ ಮುಖ್ಯ ಸ್ಥಳ. ಕೈಗಾರಿಕೆ ವಾಣಿಜ್ಯ, ಕೃಷಿ ಇತ್ಯಾದಿ ರಂಗಗಳಲ್ಲಿ ವೇಗವಾಗಿ ಬೆಳೆಯುತ್ತಿರುವ ಪಟ್ಟಣ. ಇರುವ ಕಾಲೇಜುಗಳಲ್ಲಿ ಸಾಕಷ್ಟು ಸ್ಥಳವಕಾಶ ಇಲ್ಲ. ಆದ್ದರಿಂದ ಪುತ್ತೂರಿನ ಸರ್ಕಾರೀ ಪದವಿ ಪೂರ್ವ ಕಾಲೇಜನ್ನು ಸರ್ಕಾರೀ ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸಬೇಕಾಗಿದೆ ಎಂದು ಅಲ್ಲಿನ ಜನತೆಯ ಬಹಳ ದಿನಗಳ ಆಶಯ. ಹಾಗೆಯೇ ಅಲ್ಲಿನ ಸರ್ಕಾರೀ ಹೈಯ್ಯರ್ ಪ್ರೈಮರಿ ಎಲಿಮೆಂಟರಿ ಶಾಲೆಯನ್ನು ಪದವಿ ಪೂರ್ವ ಕಾಲೇಜಿಗೆ ಬಿಡ್ತಿಗೊಳಿಸಬೇಕೆಂಬುದೂ ಜನತೆಯ ಬೇಡಿಕೆ. ಹೀಗಾದಲ್ಲಿ ಇರುವ ಸ್ಥಳಾವಕಾಶದಲ್ಲಿಯೇ ಹೆಚ್ಚಿನ ಶೈಕ್ಷಣಿಕ, ಸೌಲಭ್ಯಗಳಿಗೆ ಪುತ್ತೂರು ಹಾಗೂ ಅಸು ಪಾಸಿನ ಜನತೆಗೆ ನೀಡಿದಂತಾಗುತ್ತದೆ. ಈ ವಿಚಾರದಲ್ಲಿ ಆದಷ್ಟು ಬೇಗ ಸೂಕ್ತ ಮಂಜೂರಾತಿ ನೀಡ ಬೇಕಾಗಿ ಸರಕಾರವನ್ನು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪದವಿ ಪೂರ್ವ ಕಾಲೇಜನ್ನು ಸರ್ಕಾರೀ ಪ್ರಥಮ ದರ್ಜೆ ಕಾಲೇಜಾಗಿ ಮಾಡಬೇಕೆಂದು ಹೇಳಿದ್ದಾರೆ: ಪುತ್ತೂರಿನಲ್ಲಿ ಈಗಾಗಲೇ ಖಾಸಗಿ

ಪ್ರಥಮ ದರ್ಜೆ ಕಾಲೇಜು ಇದೆ. ಆದರೂ ಸಹ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಜೊತೆಗೆ ಅಲ್ಲಿ ಇರತಕ್ಕಂಥಾ ಹುಡುಗರ ಸಂಖ್ಯೆ ಏನು ಇದೆ ಮತ್ತು ಸ್ಥಳಾವಕಾಶ ಏನು ಇದೆ ಅದರ ಮಾಹಿತಿ ತರಿಸಿಕೊಂಡು ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

15 ಹಿರಿಯೂರಿನಲ್ಲಿ ಅಗ್ನಿಶಾಮಕ ದಳವನ್ನು ಒದಗಿಸುವುದು

ಶ್ರೀ ಆರ್. ರಾಮಯ್ಯ.—ಹಿರಿಯೂರು ತಾಲ್ಲೂಕಿನಲ್ಲಿ ಆಗಾಗ್ಗೆ ಸಂಭವಿಸುವ ಅಗ್ನಿ ಅಪಘಾತವನ್ನು ಗಮನಿಸಿದರೆ ಅದರಲ್ಲೂ ಇತ್ತೀಚೆಗೆ ೧೯೬೬ನೇ ಸಾಲಿನಲ್ಲಿ ಹಿರಿಯೂರು ನಗರದ ಒಂದರಲ್ಲೇ ಸುಮಾರು ೧೫೦ ಮನೆಗಳು ಎರಡು ಬಾರಿ ಅಗ್ನಿದೇವನಿಗೆ ಬಲಿಯಾಗಿರುವುದನ್ನು ನೋಡಿದರೆ ಭಯಾನಯಕವೆನಿಸುತ್ತದೆ. ಹೀಗೆ ಪದೇ ಪದೇ ಉಂಟಾಗುವ ಈ ಅನಾಹುತವನ್ನು ತಡೆಗಟ್ಟಲು ದೂರದ ಚಿತ್ರದುರ್ಗದಲ್ಲಿರುವ ಅಗ್ನಿಶಾಮಕದಳ ಬರುವುದರೊಳಗೆ ಗುಡಿಸಲುಗಳು ಸುಟ್ಟು ಭಸ್ಮವಾಗಿರುತ್ತವೆ. ಆದುದರಿಂದ ಸರ್ಕಾರ ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಹಿರಿಯೂರು ಪಟ್ಟಣದಲ್ಲಿ ಒಂದು ಅಗ್ನಿಶಾಮಕ ದಳವನ್ನು ತೆರೆಯಲು ವ್ಯವಸ್ಥೆ ಮಾಡಬೇಕೆಂದು, ಇದರಿಂದಾಗಿ ಈ ತಾಲ್ಲೂಕಿನ ಇತರೇ ಹಳ್ಳಿಗಾಡಿನಲ್ಲಿ ಸಂಭವಿಸುವ ಅಗ್ನಿ ಅನಾಹುತವನ್ನು ತಪ್ಪಿಸಲು ಪ್ರಯೋಜನಕಾರಿಯಾಗುತ್ತದೆ ಎಂದು ಕೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಚಾರವನ್ನು ಮಾನ್ಯ ಗೃಹಮಂತ್ರಿಗಳ ಗಮನಕ್ಕೆ ತಂದು ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

16 ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಯ ನೌಕರರ ಬೇಡಿಕೆಗಳು

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ದಾವಣಗೆರೆಯ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ನೌಕರರು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದ ನೋಟೀಸಿನ ವಿಷಯವಾಗಿ ಮಾನ್ಯ ಸಹಕಾರ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ದಾವಣಗೆರೆ ತಾಲ್ಲೂಕು ಕೃಷಿ ಉತ್ಪಾದನಾ ಸಹಕಾರೀ ಸಂಸ್ಥೆ ಏನು ಇದೆ ಅದು ಈ ರೆಗ್ಯುಲೇಟೆಡ್ ಮಾರ್ಕೆಟ್ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆ ಸೊಸೈಟಿ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅಲ್ಲಿ ನೌಕರರಿಗೆ ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಬಹುಶಃ ಈ ಸೊಸೈಟಿಯಲ್ಲಿ ವ್ಯವಹಾರ ನೋಡಿದರೆ ಇದರಲ್ಲಿ ಅಕ್ಕೂಮ ಲೇಟೆಡ್ ಲಾಸ್ ೩೬ ಸಾವಿರ ಆಗಿದೆ. ಇದರಲ್ಲಿ ಷೇರ್ ಕ್ಯಾಪಿಟಲ್ ೫೫ ಲಕ್ಷ ಇದೆ. ಸರ್ಕಾರ ೪ ಲಕ್ಷ ಕೊಟ್ಟಿದೆ. ನಂಬರ್ ಎಂಪ್ಲಾಯಿಸ್ ಇದರಲ್ಲಿ ಇರುವುದು ೯ ಜನ. ಇವರಿಗೆಲ್ಲಾ ಮಂತ್ಲಿ ಪೇ ಸುಮಾರು ೭ ಸಾವಿರ ಆಗುತ್ತದೆ. ಬಹುಶಃ ಅವರು ಇಡೀ ರಾಜ್ಯದ ಬಗ್ಗೆ ಯೋಚನೆ ಮಾಡಿ ಈ ರೀತಿ ಬರೆದಿರಬಹುದು. ಈಗ ಕೇಂದ್ರ ಸರ್ಕಾರದ ಲೆವಿ ಪಾಲಿಸಿ ಬದಲಾವಣೆ ಆಗಿರುವುದರಿಂದ, ಈ ರೈಸ್ ಮಿಲ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಮೊದಲು ಭತ್ತವನ್ನು ಲೆವಿ ಮೂಲಕ ವಸೂಲಿ ಮಾಡಲಾಗುತ್ತಿತ್ತು. ಆದರೆ ಈಗ ಅಕ್ಕಿಯನ್ನೇ ಲೆವಿ ರೂಪದಲ್ಲಿ ವಸೂಲಿ ಮಾಡಲಾಗುತ್ತಿದೆ. ಈ ಕಾರಣದಿಂದ ಈ ರೈಸ್ ಮಿಲ್‌ಗಳಿಗೆ ಸರಿಯಾಗಿ ಕೆಲಸ ಸಿಗುತ್ತಿಲ್ಲ. ಕೆಲಸ ಇಲ್ಲದಿರುವ ಕಾರಣ ಇವು ನಷ್ಟದಲ್ಲಿವೆ. ಈ ನಷ್ಟವನ್ನು ತಪ್ಪಿಸಲು ಇನ್ನು ಮುಂದೆ ಈ ಸಹಕಾರಿ ಸಂಘಗಳ ವಶದಲ್ಲಿರುವ ರೈಸ್ ಮಿಲ್‌ಗಳಿಂದ ಲೆವಿಯನ್ನು ವಸೂಲಿ ಮಾಡಬಾರದು ಎಂದು ನಾವು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಜೊತೆ ಮಾತನಾಡುತ್ತಿದ್ದೇವೆ. ಇಲಾಖೆ ಮೂಲಕ ಭತ್ತವನ್ನು ಕೊಂಡು ಈ ಮಿಲ್‌ಗಳಿಗೆ ಹಲ್ ಮಾಡಲಂ ಕೊಡಬೇಕು. ನಂತರವೂ ಈ ಮಿಲ್‌ಗಳಿಗೆ ಏನಾದರೂ ನಷ್ಟವಾದರೆ ಅದನ್ನು ಅವರೇ ಅನುಭವಿಸಬೇಕು ಎಂಬ ಬಗ್ಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಜೊತೆ ನಾವು ಮಾತುಕತೆ ನಡೆಸಿದ್ದೇವೆ. ಇನ್ನು ೧೫ ದಿವಸಗಳಲ್ಲಿ ಇದು ತೀರ್ಮಾನ ಆಗಬಹುದು.